ಇ) ಹಾಗಿದ್ದಲ್ಲಿ ಆ ಬಗ್ಗೆ ಎಷ್ಟು ಜನರನ್ನು ಗುರ್ತಿಸಲಾಗಿದೆ, ಅವರಿಗೆ ಎಂದು ಮನೆ ಕಟ್ಟಿಸಿಕೊಡುವುದು (ವಿವರ ನೀಡುವುದು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :—

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ ಕಳೆದ ವರ್ಷ ಮಳೆಗಾಲದಲ್ಲಿ ಅತಿವೃಷ್ಟಿಯಿಂದ ಪೂರ್ತಿಯಾಗಿ 37 ಹಾಗೂ ಭಾಗಶಃ 3885 ಮನೆಗಳು ಬಿದ್ದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪೂರ್ತಿ ಬಿದ್ದ ಮನೆಗಳಿಗೆ ತಲಾ ರೂ. 10,000.00 ಪರಿಹಾರ ನೀಡಿದೆ. ಪೂರ್ತಿ ಮನೆಬಿದ್ದ ಬಡ ವಸತಿಹೀನರಿಗೆ ಸರ್ಕಾರದ ಯೋಜನೆಗಳ ರೀತಿ ಮನೆ ನೀಡಲು ಪರಿಶೀಲಿಸಲಾಗುವುದು.

ಇ) ಆ ಮನೆಗಳು ಪೂರ್ತಿಯಾಗಿ ಬಿದ್ದಿರುವ ಬಗ್ಗೆ ಅರ್ಹ ಬಡವರಿಗೆ ಸರ್ಕಾರದ ಯೋಜನೆಗಳ ರೀತಿ ಮನೆ ನೀಡಲು ಪರಿಶೀಲಿಸಲಾಗುವುದು.

ಬಾಗಲಕೋಟೆ ನಗರ ಮುಳುಗಡೆ ಸಂತ್ರಸ್ತರಿಗೆ ನಿವೇಶನ.

899(1368) ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗಲಕೋಟೆ ನಗರದ ಮುಳುಗಡೆಯಲ್ಲಿ ಬರಲಿರುವ 521 ಮೀಟರ್ ಎಫ್‌ಆರ್‌ಎಲ್‌ದಿಂದ 524.50 ಮೀಟರ್ ಎಫ್‌ಆರ್‌ಎಲ್‌ದಿಂದ ಅಡಿಯಲ್ಲಿ ಒಳಪಡುವ ಮನೆಗಳ ಸರ್ವೆ ಕಾರ್ಯ ಪೂರ್ಣಗೊಳಿಸಲಾಗಿದೆಯೇ; (ಪ್ರತಿ ವಾರ್ಡಗಳ ವಿವರ ಕೊಡುವುದು)

ಆ) 521 ರಿಂದ 524.50 ಅಡಿಯಲ್ಲಿ ಬರಲಿರುವ ಸಂತ್ರಸ್ತರಿಗೂ ನವ ನಗರದಲ್ಲಿ ನಿವೇಶನ ನೀಡಬೇಕಾದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಇಲ್ಲ. ಅಲಮಟ್ಟಿ ಆಣೆಕಟ್ಟಿನ 521 ಮೀಟರ್ ಎಫ್‌ಆರ್‌ಎಲ್ ಮತ್ತು 524.5 ಮೀಟರ್ ಎಫ್‌ಆರ್‌ಎಲ್ ನಡುವಿನ ಮನೆಗಳ ಸರ್ವೆ ಕೈಗೊಳ್ಳುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರ 521 ಮೀಟರ್ ಎಫ್‌ಆರ್‌ಎಲ್ ಮತ್ತು 524.5 ಮೀಟರ್ ನಡುವಿನಲ್ಲಿ ಮುಳುಗಡೆಯಾಗುವ ಪ್ರದೇಶದಲ್ಲಿ ಬರುವ ಸಂತ್ರಸ್ತರಿಗೆ ನಿವೇಶನಗಳನ್ನು ನೀಡುವ ವಿಷಯವು ಸಹಾ ಸರ್ಕಾರದ ಪರಿಶೀಲನೆಯಲ್ಲಿದೆ.

ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ನೋಂದಣಿಗೊಂಡ ಸಹಕಾರಿ ಸಂಸ್ಥೆಗಳು.

900(1297) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ನಾಲ್ಕು ವರ್ಷಗಳಲ್ಲಿ ಸಹಕಾರಿ ನಿಯಮದಡಿಯಲ್ಲಿ ನೋಂದಣಿ ಹೊಂದಿದ ಸಂಸ್ಥೆಗಳಾವುವು (ಹೆಸರು, ಉದ್ದೇಶ, ನೊಂದಣಿ ಹೊಂದಿದ ತಾರೀಖು ತಿಳಿಸುವುದು)

ಆ) ಆ ಪೈಕಿ ಸಮರ್ಪಕವಾಗಿ ಕೆಲಸ ನಿರ್ವಹಿಸುವ ಸಂಸ್ಥೆಗಳ ಸಂಖ್ಯೆ ಎಷ್ಟು (ಸಂಸ್ಥೆಯ ಹೆಸರುಗಳನ್ನು ತಿಳಿಸುವುದು)

ಇ) ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವ ಈ ಸಂಸ್ಥೆಗಳ ಮೇಲೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 1994-95ನೇ ಸಾಲಿನಿಂದ 1997-98ನೇ ಸಾಲಿನ ವರೆಗೆ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಒಟ್ಟು ಐವತ್ತೇಳು (57) ಸಹಕಾರ ಸಂಘಗಳು ನೊಂದಣಿಯಾಗಿರುತ್ತದೆ. ತಾಲ್ಲೂಕುವಾರು ಮತ್ತು ವರ್ಷವಾರು ವಿವರ ಇಂತಿದೆ.

	ತಾಲ್ಲೂಕು		
ವರ್ಷ	ಕುಂದಾಪುರ	ಉಡುಪಿ	ಒಟ್ಟು
1994-95	8	10	18
1995-96	10	8	18
1996-97	3	2	5
1997-98	6	10	16
ಒಟ್ಟು	27	30	57